**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತಾರನೆಯ ಅಧಿವೇಶನ**

# ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ತಿದ್ದುಪಡಿ ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–50)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 20)ನ್ನು, ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 20)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 3ನೇ ಪ್ರಕರಣದ, (1)ನೇ ಉಪ-ಪ್ರಕರಣದಲ್ಲಿ,-

(i) "ಅಂಥ ದರಗಳಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಫೀಜುಗಳನ್ನು" ಎಂಬ ಪದಗಳ ತರುವಾಯ "ಮತ್ತು ಅಂಥ ಸಮಯದ ಮಧ್ಯಂತರ ಅವಧಿಗಳಲ್ಲಿ ಫೀಜುಗಳನ್ನು ಪರಿಷ್ಕರಿಸಲು" ಎಂಬ ಪದವನ್ನು ಸೇರಿಸತಕ್ಕದ್ದು;

(ii) ಎರಡನೇ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು ನಿಯಮಿಸಬಹುದಾದಂಥ ಸಮಯದ ಮಧ್ಯಂತರ ಅವಧಿಯಲ್ಲಿ ಫೀಜುಗಳನ್ನು ಪರಿಷ್ಕರಿಸದಿದ್ದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಹಣದುಬ್ಬರ ಮತ್ತು ಇತರ ಷರತ್ತುಗಳನ್ನು ಪರಿಗಣಿಸಿ ಅಂಥ ಶೇಕಡವಾರು ಫೀಜುಗಳನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದು".

**3. ಪ್ರಕರಣ 10ರ ತಿದ್ದುಪಡಿ.-** ಮೂಲ ಅಧಿನಿಯಮದ, 10ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿ, "ಪೂರ್ವ ಪ್ರಕಟಣೆಯ ತರುವಾಯ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961(1961ರ ಕರ್ನಾಟಕ ಅಧಿನಿಯಮ 20)ಕ್ಕೆ ಈ ಮುಂದಿನವುಗಳಿಗಾಗಿ ಉಪಬಂಧಗಳನ್ನು ರಚಿಸಲು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ನಿಯಮಗಳಲ್ಲಿ ನಿಯಮಿಸಬಹುದಾದಂಥ ಮಧ್ಯಂತರ ಅವಧಿಯಲ್ಲಿ ಹಡಗಿಗೆ ತುಂಬಿದ ಸರಕುಗಳ ಮೇಲಿನ ಫೀಜುಗಳನ್ನು ಪರಿಷ್ಕರಿಸುವುದು; ಮತ್ತು

(ii) ಅವಧಿಯೊಳಗೆ ಫೀಜುಗಳನ್ನು ಪರಿಷ್ಕರಿಸದಿದ್ದರೆ, ಸರ್ಕಾರವು ಅಧಿಸೂಚನೆ ಮೂಲಕ ಶೇಕಡವಾರು ಫೀಜುಗಳನ್ನು ಹೆಚ್ಚಿಸುವುದು ಮತ್ತು ಕಡಿಮೆ ಮಾಡುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ-2** | 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ 3ನೇ ಪರಂತುಕದ ಮೂಲಕ ಸೇರಿಸಲು ಉದ್ದೇಶಿಸಿರುವ, ಸರಕುಗಳನ್ನು ಹಡಗಿಗೆ ತುಂಬಿಸುವುದ ಮೇಲೆ ವಿಧಿಸಲಾಗುವ ಫೀಜುಗಳ ದರವನ್ನು ಹಣದುಬ್ಬರ ಮತ್ತು ಅಂಥ ಇತರ ಷರತ್ತುಗಳನ್ನು ಪರಿಗಣಿಸಿ ಹೆಚ್ಚಿಸುವ ಅಥವಾ ಕಡಿಮೆ ಮಾಡುವುದರ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಮಂಕಾಳ ಎಸ್ ವೈದ್ಯ**
ಮೀನುಗಾರಿಕೆ ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961ರ

## (1961ರ ಕರ್ನಾಟಕ ಅಧಿನಿಯಮ 20) ಉದ್ಧೃತ ಭಾಗ

**XXX XXX XXX**

**3. ಹಡಗಿನ ಮೂಲಕ ಸಾಗಿಸಿದ ಸರಕುಗಳ ಮೇಲೆ ಫೀಜುಗಳನ್ನು ವಿಧಿಸುವುದು, ಇತ್ಯಾದಿ.-** (1) ಕರ್ನಾಟಕ ರಾಜ್ಯದಲ್ಲಿ ನಿಯಮಿಸಬಹುದಾದ ಅಂಥ ದರಗಳಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಫೀಜುಗಳನ್ನು,-

(ಎ) ಯಾವುದೇ ಬಂದರಿನಲ್ಲಿ ಹಡಗುಗಳನ್ನು ಹತ್ತುವ ಮತ್ತು ಅದರಿಂದ ಇಳಿಯುವ ಎಲ್ಲಾ ಪ್ರಯಾಣಿಕರು;

(ಬಿ) ಯಾವುದೇ ಬಂದರಿನ ಪರಿಮಿತಿಗಳೊಳಗೆ ತಂಗಿರುವ ಅಥವಾ ಇರುವ ಯಾವುದೇ ನೌಕೆಯಿಂದ ಇಳಿಸಿದ ಅಥವಾ ಅದಕ್ಕೆ ತುಂಬಿದ ಸರಕುಗಳು;

(ಸಿ) ಯಾವುದೇ ಬಂದರಿನ ಪರಿಮಿತಿಗಳೊಳಗೆ ಆ ಉದ್ದೇಶಕ್ಕಾಗಿ ಒದಗಿಸಿರುವ ಯಾವುದೇ ಸ್ಥಳದಲ್ಲಿ ದಾಸ್ತಾನು ಮಾಡಿರುವ ಸರಕುಗಳು; ಮತ್ತು

(ಡಿ) ಯಾವುದೇ ಬಂದರಿನ ಪರಿಮಿತಿಗಳೊಳಗೆ ಅದಕ್ಕೆ ಅಥವಾ ಅದರಿಂದ ಸರಕುಗಳನ್ನು ತರುವ ಅಥವಾ ಸ್ಥಳಾಂತರಿಸುವ ಅಥವಾ ಬಾಡಿಗೆಗಾಗಿ ಓಡಾಡುವ ಪಶುಗಳು ಮತ್ತು ವಾಹನಗಳು;

(ಇ) ಯಾವುದೇ ಬಂದರಿನ ರೇವಿನಲ್ಲಿ ಪ್ರಯಾಣಿಕರು ಅಥವಾ ಸರಕುಗಳನ್ನು ನೌಕೆಗಳಿಂದ ನೌಕೆಗಳಿಗೆ ಬದಲಾಯಿಸುವುದು;

(ಎಫ್) ಯಾವುದೇ ಬಂದರಿನಲ್ಲಿ ಅಂಥ ನೌಕೆಯಿಂದ ಅಥವಾ ನೌಕೆಗೆ, ಯಾವುದೇ ಹಡಗುಕಟ್ಟೆಯಿಂದ, ಬಂದರು ಕಟ್ಟೆಯಿಂದ, ಹಡಗು ಇಳಿದಾಣದಿಂದ, ಹಡಗು ದಕ್ಕೆಯಿಂದ, ಭೂಮಿಯಿಂದ, ಕಟ್ಟಡದಿಂದ ಅಥವಾ ಸ್ಥಳದಿಂದ ಯಾವುದೇ ಹಡಗು ಕಟ್ಟೆಗೆ, ಬಂದರು ಕಟ್ಟೆಗೆ, ಹಡಗು ಇಳಿದಾಣಕ್ಕೆ, ಹಡಗು ದಕ್ಕೆಗೆ, ಭೂಮಿಗೆ, ಕಟ್ಟಡಕ್ಕೆ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಇಳಿಸುವುದು ಅಥವಾ ತುಂಬುವುದು;

(ಜಿ) ಅಂಥ ಯಾವುದೇ ಸ್ಥಳದ ಮೇಲಿನ ಸರಕುಗಳ ಕ್ರೇನು ಬಾಡಿಗೆ ಅಥವಾ ಹೊರುವ ಮಜೂರಿ;

(ಹೆಚ್) (i) ನೌಕೆಗಳ ಅಥವಾ ದೋಣಿಗಳ ಮೂಲಕ, ಮೇಲೆ ಹೇಳಲಾದಂತೆ, ಯಾವುದೇ ಲಂಗರುಗಳು, ಹಡಗುಕಟ್ಟೆ, ಬಂದರುಕಟ್ಟೆ, ಹಡಗು ಇಳಿದಾಣ, ಹಡಗುದಕ್ಕೆ, ಭೂಮಿ, ಕಟ್ಟಡ ಅಥವಾ ಸ್ಥಳದಲ್ಲಿ ಅಥವಾ ಅದರ ಪಕ್ಕಪಕ್ಕದಲ್ಲಿ ಸಂಪರ್ಕ ಕಲ್ಪಿಸುವ ಅಥವಾ ಇರುವ;

(ii) ಪ್ರಯಾಣಿಕರು ಅಥವಾ ಸರಕುಗಳನ್ನು ಒಯ್ಯುವ ಪ್ರಾಣಿಗಳು ಅಥವಾ ವಾಹನಗಳು, ಮೇಲೆ ಹೇಳಲಾದಂತೆ ಯಾವುದೇ ಹಡಗುಕಟ್ಟೆ, ಬಂದರುಕಟ್ಟೆ, ಹಡಗು ಇಳಿದಾಣ, ಹಡಗು ದಕ್ಕೆ, ಭೂಮಿ, ಕಟ್ಟಡ ಅಥವಾ ಸ್ಥಳದಲ್ಲಿ ಅಥವಾ ಅವುಗಳ ಮೇಲೆ ಬಾಡಿಗೆಗಾಗಿ ಪ್ರವೇಶಿಸುವ ಅಥವಾ ಓಡಿಸುವ ;

(iii) ಆಮದು ಮಾಡಿಕೊಳ್ಳಲಾದ ಅಥವಾ ರಫ್ತು ಮಾಡಲು ಉದ್ದೇಶಿಸಲಾದ ಸರಕುಗಳ ಒಡೆಯನು ಅಥವಾ ಸ್ಟೀಮರಿನ ಏಜೆಂಟನು ಯಾವುದೇ ಬಂದರಿನಲ್ಲಿ ಭೂಮಿ ಅಥವಾ ಷೆಡ್ಡುಗಳನ್ನು ಗುತ್ತಿಗೆಗೆ ಕೊಡುವ;

(iv) ಯಾವುದೇ ಬಂದರಿನಲ್ಲಿನ ಯಾವುದೇ ಭೂಮಿ, ಕಾಮಗಾರಿಗಳು ಅಥವಾ ಸಾಧನ ಸಾಮಗ್ರಿಗಳ ಯಾವುದೇ ಇತರ ಬಳಕೆಯ

- ಉದ್ದೇಶಕ್ಕಾಗಿ ಬಳಸಿಕೊಳ್ಳಲಾದ ಯಾವುದೇ ಬಂದರಿನಲ್ಲಿನ ಯಾವುದೇ ಸ್ವತ್ತು ಅಥವಾ ಸ್ಥಳ;

(ಐ) ಯಾವುದೇ ಬಂದರಿನಲ್ಲಿ ನೌಕೆಗಳು, ಪ್ರಯಾಣಿಕರು ಅಥವಾ ಸರಕುಗಳ ಸಂಬಂಧದಲ್ಲಿ ಯಾವುದೇ ಇತರ ಸೇವೆ

-ಇವುಗಳ ಮೇಲೆ ವಿಧಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ಯಾವುದೇ ವರ್ಗದ ಸರಕುಗಳು, ಪ್ರಯಾಣಿಕರು, ನೌಕೆಗಳು, ಪಶುಗಳು ಅಥವಾ ವಾಹನಗಳನ್ನು ಅಧಿಸೂಚನೆಯ ಮೂಲಕ ಈ ಪ್ರಕರಣದ ಮೇರೆಗೆ ಯಾವ ಫೀಜಿಗೆ ಅವು ಗುರಿಯಾಗಬಹುದೋ ಆ ಯಾವುದೇ ಫೀಜಿನಿಂದ, ಪೂರ್ಣವಾಗಿ ಅಥವಾ ಭಾಗಶಃ ವಿನಾಯಿತಿಗೊಳಿಸಬಹುದು:

ಮತ್ತೂ ಪರಂತು, ಮಂಗಳೂರು ಬಂದರಿಗಾಗಿ ಬೇರೆ ಬೇರೆ ಫೀಜುಗಳು ಮತ್ತು ಬೇರೆ ಬೇರೆ ಷರತ್ತುಗಳನ್ನು ನಿಯಮಿಸಬಹುದು.

**XXX XXX XXX**

**10. ನಿಯಮಗಳು.-** (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 250, 17ನೇ ಆಗಸ್ಟ್ 2025